## 5. ಪ್ರಕಟಣೆ

ಜನತಾದಳ (ಜಾತ್ಯತೀತ) ಪಕ್ಷದ ರಾಜ್ಯಾಧ್ಯಕ್ಷರಾದ ಶ್ರೀ ಎ. ಕೃಷ್ಣಪ್ಪನವರು ದಿನಾಂಕ 27.1.2014 ರಂದು ಪತ್ರ ನೀಡಿದ್ದು, ಸದರಿ ಪತ್ರದಲ್ಲಿ ದಿನಾಂಕ 27.1.2014 ರಂದು ನಡೆದ ಜನತಾದಳ (ಜಾತ್ಯತೀತ) ಶಾಸಕಾಂಗ ಪಕ್ಷದ ಸಭೆಯಲ್ಲಿ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ, ಶ್ರೀ ವೈ.ಎಸ್.ವಿ. ದತ್ತರವರನ್ನು ಶಾಸಕಾಂಗ ಪಕ್ಷದ ಉಪ ನಾಯಕರಾಗಿ ಹಾಗೂ ಶ್ರೀ ಎಸ್. ಮಧು ಬಂಗಾರಪ್ಪನವರನ್ನು ಸಚೇತಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿರುತ್ತದೆಂದು ತಿಳಿಸಿ, ಮಾನ್ಯತೆ ಮಾಡಲು ಕೋರಿರುತ್ತಾರೆ. ಆದುದರಿಂದ, ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಜನತಾದಳ (ಜಾತ್ಯತೀತ) ಶಾಸಕಾಂಗ ಪಕ್ಷದ ನಾಯಕರಾಗಿರುತ್ತಾರೆಂದು, ಶ್ರೀ ವೈ.ಎಸ್.ವಿ. ದತ್ತರವರು ಉಪನಾಯಕರಾಗಿರುತ್ತಾರೆಂದು ಹಾಗೂ ಶ್ರೀ ಎಸ್. ಮಧು ಬಂಗಾರಪ್ಪನವರು ಜನತಾದಳ(ಜಾತ್ಯತೀತ) ಶಾಸಕಾಂಗ ಪಕ್ಷದ ಸಚೇತಕರಾಗಿರುತ್ತಾರೆಂದು ಈ ಮೂಲಕ ಸದನದ ಗಮನಕ್ಕೆ ತರಲಾಗಿದೆ.

## 6. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಮುಂದುವರೆದ ಉತ್ತರ

ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು): ಅಧ್ಯಕ್ಷರೆ, ಹೈದಾರಾಬಾದ್ ಕರ್ನಾಟಕ ಅಭಿವೃದ್ಧಿ ಬಗ್ಗೆ ಕೇಂದ್ರ ಸರ್ಕಾರ ಸಂವಿಧಾನ ತಿದ್ದುಪಡಿ ಮಾಡಿ 371(ಜೆ) ಪ್ರಕಾರ ವಿಶೇಷ ಸ್ಥಾನಮಾನ ಕೊಡುವ ಬಗ್ಗೆ ತೀರ್ಮಾನವಾಗಿದೆ. ಈಗಾಗಲೇ ಅದರ ಬಗ್ಗೆ ಏನೇನು ಮಾಡಬೇಕು, ಆ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮಂಡಳಿ ರಚನೆ ಮಾಡಿದ್ದೇವೆ. ನಿಯಮಗಳನ್ನು ಮಾಡಿದ್ದೇವೆ. ನೋಟಿಫಿಕೇಷನ್ issue ಮಾಡಿದ್ದೇವೆ. ಜೊತೆಗೆ 153 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. 14ನೇ ಹಣಕಾಸು ಆಯೋಗದಲ್ಲಿ ಸುಮಾರು 15,000/– ಕೋಟಿ ರೂ.ಗಳಿಗಿಂತಲೂ ಹೆಚ್ಚಿನ ಹಣವನ್ನು ಹೈದರಾಬಾದ್ ಕರ್ನಾಟಕ ಅಭಿವೃದ್ಧಿಗೆ ಕೊಡಬೇಕೆಂದು 14ನೇ ಹಣಕಾಸು ಆಯೋಗದಲ್ಲಿ ಮನವಿ ಮಾಡಿದ್ದೇವೆ. Memorandum ಕೂಡ ಕೊಟ್ಟಿದ್ದೇವೆ.